
# ಹದ

ಪುಸ್ತಕದ ಮೇಲೆ ಬಿದ್ದ ಬೆಳಕು
ಪ್ರತಿಫಲಿಸಿ
ನಿಧಾನ ಇಂಗುತ್ತದೆ
ಕಂಗಳಲ್ಲಿ,
ಮನಸಿನಲ್ಲೂ
ಬೆಳದಿಂಗಳಂತೆ.

ಮೊಬೈಲಿನ ಪ್ರಖರ ಬೆಳಕು
ನೇರ
ಕುಕ್ಕುತ್ತದೆ ಕಂಗಳನ್ನು
ಮನಸ್ಸನ್ನೂ
ಬಿರುಬಿಸಿಲಿನಂತೆ.

ಬಿಸಿಲಲ್ಲಿ ಅತಿಯಾಗಿ
ಬೇಯಬಾರದು
ಬೆಳದಿಂಗಳಲ್ಲಿ ಅತಿ
ತೋಯಬಾರದು.



# ಕಲೆ

'ಈ ಮರದ ಹೂವು
ಅಹಾ, ಅದೆಂಥ ಚೆಲುವು!
ಹಣ್ಣು ಅದೆಷ್ಟು ಸಿಹಿ! ಸ್ವಾದಿಷ್ಟ!'
ಕೊಂಡಾಡುತ್ತಾನೆ
ಒಬ್ಬ.

'ಇದರ ಬೇರು
ಥೂ! ಅದೆಲ್ಲೆಲ್ಲಿ ಊರಿದೆ
ಏನೆಲ್ಲ ಹೀರಿದೆ ಗೊತ್ತಾ?'
ಹೇವರಿಸುತ್ತಾನೆ
ಇನ್ನೊಬ್ಬ.

ಅವರವರ ಕಣ್ಣು,
ಅವರವರ ನೋಟ,
ಪ್ರಾಪ್ತಿ;
ತನ್ನ ಪಾಡಿಗೆ ತಾನು
ಮರ.

